ಕಾಟ್ಮಾರಿಗೆ ಪಟ್ಲುಕೆ ಹೋದ್ಮೇಲೆ ಗ್ಯಾನ್ವೇ ಸುದ್ವಿಲ್ವಂತೆ ಹೆಂಗೆಂಗೋ ಆಡ್ತಾನಂತೆ, ಏನೇನೋ ಮಾತಾಡ್ತಾನಂತೆ, ಯಾವುದ್ರು ಮ್ಯಾಗೂ ದ್ಯಾಸ್ವೇ ಇಲ್ವಂತೆ' ಅಂದ ಹೊಟ್ಟಗಪ್ಪನತ್ತ ತಿರುಗಿ. 'ಇಂತ ಅಡ್ನಾಡಿ ಮಾತ್ಗುಳಾಡ್ದುದ್ರೆ ತಿಂದುದ್ದು ಮೈಗತ್ತಲ್ವ' ಅನ್ನುವಂತೆ ಭೈರಜ್ಜ ಮುದ್ದಾಚಾರಿಯತ್ತಲೇ ನೋಡುತ್ತಾ ಒಲೆಯ ಮೇಲಿಂದ ಇಡ್ಲಿ ಪಾಸಾಲೆಯನ್ನು ಕೆಳಗಿಸಿ, ಅವುಗಳು ಬೆಂದಿರುವುದನ್ನು ನಿಕ್ಕಿ ಮಾಡಿಕೊಳ್ಳತೊಡಗಿದ. ಅರೆಗಿವುಡ ಹೊಟ್ಟಗಪ್ಪನಿಗೆ ಮುದ್ದಾಚಾರಿಯಾಡಿದ ಮಾತುಗಳು ಕತ್ರುಸ ತಲುಪದೇ ಹೋದರೂ, ಅವನ ಮುಖಭಾವದಿಂದಲೇ ಅದಾವುದೋ ಘನಂಧಾರಿ ಸುದ್ದಿಯೇ ಇರಬೇಕೆಂದು ಅಂದಾಜಿಸಿ, ಒಕ್ಕಣ್ಣು ಮಾಡಿಕೊಂಡು ಬೊಚ್ಚು ಬಾಯನ್ನು ಹಾರೊಡಕಂಡು ಆಟೋ ಈಟೋ ಚಾಲ್ತಿಯಲ್ಲಿದ್ದ ಬಲಗಿವಿಯನ್ನು ಮುದ್ದಾಚಾರಿಯತ್ತ ಒಡ್ಡಿ, 'ಏನೋ ಅಂದಂಗಾತು' ಅಂದ. ಕೊಂಚ ಅಸಹನೆಯಿಂದ ಮುಖ ಕಿವುಚಿಕೊಂಡ ಮುದ್ದಾಚಾರಿ ಒಂಚೂರು ಬಿರುವಾಗಿ ಮತ್ತವೇ ಮಾತುಗಳನ್ನು ಮತ್ತೊಮ್ಮೆ ನಡೆಸಿದರೂ ಅರೆಬರೆ ದಕ್ಕಿಸಿಕೊಂಡ ಹೊಟ್ಟಗಪ್ಪ, 'ಅಂಗಂಥಾ ಎಂಗೋಪ್ಪಾ' ಅಂತ ಅಂದಾಜಿನಲ್ಲಿ ಅಂದವನೇ ಲೋಟದ ತಳದಲ್ಲಿದ್ದ ಕಾಫಿಯನ್ನು ತಳಮಟ್ಟ ಎಳಕಂಡು, ಪಾಸಾಲೆಯೊಳಗಿಂದ ದಬರಿಗೆ ಹಾಕುತ್ತಿದ್ದ ಹಬೆಯಾಡುವ ಇಡ್ಲಿಗಳತ್ತ ಕಣ್ಣು ನೆಟ್ಟ. 'ಹೋಗಿ ಹೋಗಿ ನಿಂಗೇಳ್ತಿದೀನಲ್ಲ' ಅಂತ ಗೊಣಗಿಕೊಂಡ ಮುದ್ದಾಚಾರಿ ತಡಿಕೆಯ ಇಣುಕು ಕಿಂಡಿಯಲ್ಲಿ ರಸ್ತೆಯಾಚೆಗೆ ಇಣುಕಿದ. ಹೊಲಮಾಳದ ಕಾಲುದಾರಿಯಲ್ಲಿ ನಾಯೊಂದು ಮಣ್ಣನ್ನು ಕೆದಕಿ ಸುಂಟ್ರಿಸಿಕೊಂಡು ನಿದ್ದೆಗೆ ಜಾರುವ ಯತ್ನದಲ್ಲಿತ್ತು.

ಆದರೆ ಯಾವ ಮಾತುಗಳು ಹೊಟ್ಟಗಪ್ಪನನ್ನು ಎಟಕಿಸಿಕೊಳ್ಳಲು ಯಣಗಿದವೋ ಅವೇ ಮಾತುಗಳು ಬಸ್‌ಸ್ಟಾಪಿನ ಶೆಲ್ಟರೊಳಗೆ ಕೂತಿದ್ದ ಬೂದೂರಿಗೆ ಬುದೂರನೆ ನಾಟಿ, ಅವುಗಳು ಸುಳ್ಳೋ ಪೊಳ್ಳೋ ಅನ್ನುವುದನ್ನು ಪರೀಕ್ಷಿಸಲೋಸುಗ, ಗೆಣೆಕಾರ ಚಿಕ್ಬಸವನಿಗೆ ಚಕ್ಕನೆ ಫೋನಾಯಿಸಿದ. ಆಗಷ್ಟೇ ಆಫೀಸಿಗೆಂದು ಮನೆ ಬಿಟ್ಟಿದ್ದ ಚಿಕ್ಬಸವ ಅವುಗಳನ್ನು ಕೇಳುತ್ತಲೇ ಮಂಕಾದವನಾಗಿ, ಕೆಲದಿನಗಳಿಂದಷ್ಟೇ ಊರಿಗೋಗಿದ್ದಾಗ ಅಪ್ಪೀತಪ್ಪಿ ಕಿವಿಗೆ ಬೀಳದಿದ್ದವುಗಳು, ಅದೂ ಅಪ್ಪ ಗುಂಡುಕಲ್ಲಿನಂತಿರುವಾಗ ಏಕ್ದಂ ಎದ್ದು ಕೂತ ಪರಿಗೆ ಸೋಜಿಗಕ್ಕೊಳಗಾದ.

★★★

ಊರಲ್ಲಿ 'ನಾಸ್ಬಾಯಿ' ಅಂತಾನೇ ಕರೀತಿದ್ದ ಮುದ್ದಾಚಾರಿಯ ಮಾತುಗಳೇನಾದರೂ ಒಂದುಪಕ್ಷ ನಿಜವಾಗಿಬಿಟ್ಟರೆ, ಅನ್ನುವ ಆತಂಕಕ್ಕೆ ಒಳಗಾದ ಚಿಕ್ಬಸವ ಇನ್ನೇನು ಆಫೀಸಿನೊಳಕ್ಕೆ ಕಾಲಿಡಬೇಕು ಅಷ್ಟರಲ್ಲಿ ಹೆಂಡತಿ ನಾಗುವಿನಿಂದ ಫೋನ್ ಬಂದು, 'ಮಾವ ಹೆಂಗೆಂಗೋ ಆಡ್ತಾವ್ರೆ, ಏನೇನೋ ಮಾತಾಡ್ತಾವ್ರೆ, ಬಿರೀನ ಬನ್ರಿ ಮನೆಗೆ' ಅಂದದ್ದೇ, 'ಅಯ್ಯೋ ಶಿವ್ನೇ ಇದೊಳ್ಳೆ ಗ್ರಾಚಾರಾಯ್ತಲ್ಲ' ಅಂದುಕೊಂಡು ದಡಗುಟ್ಟಿಕೊಂಡು ಮನೆ ತಲುಪಿದ.

ಚಿಕ್ಬಸವನನ್ನು ಕಂಡದ್ದೇ ತಡ, 'ಲೋ ಬಸ್ವಣ್ಣ ಅದೆಲ್ಲೋಗಿದ್ಯೋ ಈಟೊತ್ತಿನ್ ತನ್ಕ, ವಲ್ಕೆ ಅರ್ತೆ ಹೊಡ್ಯಾಕೇಂತ ಎಲ್ರೂ ಕುಂಟೆ ಹೂಡವ್ರೆ, ಅಂಥಾದ್ರಾಗೆ ನೀನ್ ನೋಡಿದ್ರೆ ಎತ್ತುಗಳ್ನ ಇನ್ನೂ ಗೊಂತಲೇ ಬಿಟ್ಟಿದೀಯಾ, ಬೇಗ್ಬೇಗ ಬಿಚ್ಕ ನಾವೂ ಆರೂಡಾನ' ಅಪ್ಪ ಕಾಟ್ಮಾರಯ್ಯ ಅಸಂಬದ್ಧ ಮಾತುಗಳನ್ನಾಡುತ್ತಿದ್ದ. ಚಿಕ್ಬಸವ ಏನೊಂದನ್ನೂ ನಿಟುಕಿಸಿಕೊಳ್ಳಲಾಗದೆ ಅವ್ವನತ್ತ ನೋಡಿದ. ಅವ್ವ ಸಣ್ಮಾದಮ್ಮ ತುಂಬ್ತುಂಬಿ ಬರುತ್ತಿದ್ದ ಕಣ್ಣೀರನ್ನು ಸೆರಗಿನ ಅಂಚಿನಿಂದ ತೀಡಿಕೊಳ್ಳುತ್ತಾ